ಏರಿಕೆ ಬಗ್ಗೆ ಧರಣಿ ನಡೆಸಿದ್ದೆವು. ಅದಕ್ಕಿಂತ ಮುಂಚೆ ನನ್ನ ಭಾಷಣದಲ್ಲೇ ನಾನು ಬೇಡಿಕೆ ಮಾಡಿದ್ದೆ ಸದನದ ಒಂದು ಸಮಿತಿ ಮಾಡಿ ಅದರಲ್ಲಿ ಮೇಲ್ಮನೆ ಮತ್ತು ಕೆಳಮನೆ ಸದಸ್ಯರು ಸೇರಲಿ, ನಾಗರಾಜ್ ಸಮಿತಿ ವರದಿ ಆಧಾರದ ಮೇಲೆ ಮತ್ತು ಹೈಕ್ ಮಾಡಿದ್ದನ್ನು ಎರಡೂ ನೋಡಿ ಅದರ ಸಮಿತಿಯನ್ನು ಅರ್ಥಮಾಡಿಕೊಂಡು ಪುನಃ ನೀವು ದರ ಫಿಕ್ಸ್ ಮಾಡಬಹುದೆಂದು ಕೇಳಿಕೊಂಡಿದ್ದೆ. ಆದರೆ ಶುಕ್ರವಾರ ಅದಕ್ಕೆ ಅಷ್ಟೊಂದು ಪೋತ್ಸಾಹ ಸಿಗಲಿಲ್ಲ. ಆದರೆ ಇವತ್ತು ತಮ್ಮ ಪ್ರಯತ್ನದಿಂದ ಮತ್ತು ಅವರೂ ಕೂಡ ಇದಕ್ಕೆ ಸಹಕಾರ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸುತ್ತೇನೆ. ಮತ್ತು 20 ನೇ ತಾರೀಖಿನೊಳಗಾಗಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಅಲ್ಲಿಯವರೆಗೆ ಯಾವ ಕಲೆಕ್ಷನನ್ನೂ ಹೊಸ ರೇಟಿನಲ್ಲಿ ಮಾಡಬಾರದೆಂಬುದಕ್ಕೂ ಅವರು ಒಪ್ಪಿಕೊಂಡಿದ್ದಾರೆ. ಆ ಆರ್ಡರನ್ನು ಡೆಫರ್ ಮಾಡಿ ಎಂದು ನಾವು ಕೇಳಿಕೊಂಡಿದ್ದೇವೆ. ಆದರೆ ಅವರು ಹೇಳಿದರು ಹೊಸ ದರದ ಪ್ರಕಾರವೇ ನಾವು ಕಲ್ಕ್ಟ ಮಾಡುತ್ತೆವೆಯೇ ಹೊರತು ಹಳೆಯದರ ಮೇಲಿಲ್ಲ ಎಂಬ ಮಾತನ್ನು ಅವರು ಸ್ಪಷ್ಟಪಡಿಸಿದ್ದಕ್ಕಾಗಿ ಇದೊಂದು ಸ್ಪಷ್ಟೀಕರಣವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರಲ್ಲಿ ಮತ್ತೆ ಕನ್ಫ್ಯೂಷನ್ ಬೇಡ. ಈ ಒಳ್ಳೆಯ ಕೆಲಸಕ್ಕೆ ಎಲ್ಲಾರೂ ಸಹಕಾರ ಕೊಟ್ಟಿದ್ದಾರೆ. ನಿಜವಾಗಿ ಎಲ್ಲಾ ಸಮಸ್ಯೆಗಳೂ ಇದೇ ರೀತಿಯಲ್ಲಿ ಬಗೆಹರಿದರೆ ಸದನವೂ ಸುಗಮವಾಗಿ ನಡೆಯುತ್ತದೆ ಮತ್ತು ಅನಾವಶ್ಯಕವಾಗಿ ಏನು ಕೆಲವು ಗೊಂದಲಗಳು ನಿರ್ಮಾಣವಾಗುತ್ತದೆ. ಅದೂ ಕೂಡ ತಪ್ಪುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಆ ಸಮಿತಿಯನ್ನು ಇಂದು ಸಂಜೆಯೊಳಗಾಗಿ ಘೋಷಣೆ ಮಾಡುತ್ತೇವೆ ಎಂದು ಈಗಾಗಲೇ ತಾವು ಹೇಳಿದ್ದೀರಿ. ಈ ಮೂರೂ ಮಾತುಗಳನ್ನು ಒಪ್ಪಿದ್ದಕ್ಕಾಗಿ ಸಭಾನಾಯಕರಿಗೆ ಈ ಫಲ ದೊರಕಿಸಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಹೆಚ್.ಪಟೀಲ್(ಮುಖ್ಯ ಮಂತ್ರಿಗಳು):- ಈಗಾಗಲೇ ಚರ್ಚೆ ಮಾಡಿದ್ದೇವೆ. ಅಧ್ಯಕ್ಷರೇ ತಾವು ಪ್ರಕಟಿಸಿರುವ ಪ್ರಕಾರ, ಅವರೂ ಪ್ರತಿಷ್ಠೆ ಮಾಡಲಿಲ್ಲ ಸರ್ಕಾರವೂ ಪ್ರತಿಷ್ಠೆ ಮಾಡುವುದಿಲ್ಲ. ಆದರೆ ಕೆಲವು ನಿಷ್ಠೂರವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆಂದು ತಾವೂ ಒಪ್ಪಿದ್ದೀರಿ. ಟ್ಯಾಕ್ಸ್ ಹಾಕಬೇಡಿ ಎಂದು ಯಾರೂ ಹೇಳುವುದಿಲ್ಲ. ಆದರೆ ಯಾವುದೂ ಎಷ್ಟು ? ಏಕೆಂದರೆ 4 ವರ್ಷ ಇದನ್ನು ಮಾಡದೇ ಇದ್ದುದ್ದರಿಂದ ನನಗೆಷ್ಟು ಕಷ್ಟವಾಗುತ್ತಿದೆ. ಆಯಿತು, ಇದು ನಮ್ಮ ಶಾಸಕಾಂಗ ಸಭೆಯಲ್ಲೂ ಬಂತು. ಅದರ ಸಲಹೆಗಳ್ಲೂ ನನ್ನ ಮನಸ್ಸಿನಲ್ಲಿತ್ತು. ಇದನ್ನೆಲ್ಲಾ ತಾವು ರಚಿಸುವ ಸಮಿತಿ ಮೂಲಕ ಬಗೆಹರಿಸೋಣ.

ಸದನವು 1 ಗಂಟೆ 29 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.

(ಸದನವು ಮಧ್ಯಾಹ್ನ 3- 20ಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರು
ಶ್ರೀ ರಮೇಶ್‌ಕುಮಾರ್ ಪೀಠವನ್ನುಲಂಕರಿಸಿದ್ದರು)

ಅಧ್ಯಕ್ಷರು:- ದಿನಾಂಕ 4ನೇ ಜುಲೈ, 1996 ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ಪ್ರಸಕ್ತ ಅಧಿವೇಶನದಲ್ಲಿ ಈ ಕೆಳಕಂಡಂತೆ ಕಾರ್ಯ ಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

08-07-96 ವಸತಿಮತ್ತುನಗರಾಭಿವೃದ್ಧಿ ಇಲಾಖಾ

ಸೋಮವಾರ	ಅನುದಾನ ಬೇಡಿಕೆಗಳ ಮೇಲೆ ಚರ್ಚೆ
ಹಾಗೂ	ಹಾಗೂ ಮತಕ್ಕೆ ಹಾಕುವುದು.
09-07-96	
ಮಂಗಳವಾರ	
10-07-96	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ
ಬುಧವಾರ	ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ
ಹಾಗೂ	ಮತಕ್ಕೆ ಹಾಕುವುದು.
11-07-96	
ಗುರುವಾರ	
12-07-96	ಖಾಸಗಿ: ಸರ್ಕಾರಿ ಕಾರ್ಯಕಲಾಪ
ಶುಕ್ರವಾರ	
15-07-96	ಒಳಾಡಳಿತ, ಸಾರಿಗೆ ಸಿಬ್ಬಂದಿ ಮತ್ತು
ಸೋಮವಾರ	ಆಡಳಿತ ಸುಧಾರಣಾ ಇಲಾಖಾ ಅನುದಾನ
ಹಾಗೂ	ಹಾಗೂ ವಿದ್ಯುತ್ ಬೇಡಿಕೆಗಳ ಮೇಲೆ ಚರ್ಚೆ
16-07-96	ಹಾಗೂ ಮತಕ್ಕೆ ಹಾಕುವುದು.
ಮಂಗಳವಾರ	
17-07-96	ಶಿಕ್ಷಣ ಕಾನೂನು ಮತ್ತು ಸಂಸದೀಯ
ಬುಧವಾರ	ವ್ಯವಹಾರಗಳ ಇಲಾಖಾ ಅನುದಾನ ಬೇಡಿಕೆ
ಹಾಗೂ	ಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು
18-07-96	
ಗುರುವಾರ	
19-07-96	ಖಾಸಗಿ: ಸರ್ಕಾರಿ ಕಾರ್ಯಕಲಾಪ
ಶುಕ್ರವಾರ	
22-07-96	ಕಂದಾಯ, ಅರಣ್ಯ, ಜೀವಿಪರಿಸರ ಮತ್ತು
ಸೋಮವಾರ	ಪರಿಸರ ಇಲಾಖಾ ಅನುದಾನ ಬೇಡಿಕೆಗಳ
ಹಾಗೂ	ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು

23-07-96 ಮಂಗಳವಾರ	
24-07-96 ಬುಧವಾರ ಹಾಗೂ 25-07-96 ಗುರುವಾರ	ಕಾರ್ಮಿಕ ಮತ್ತು ಸಮಾಜ ಕಲ್ಯಾಣ ಇಲಾಖಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಹಾಗೂ ಮತಕ್ಕೆ ಹಾಕುವುದು
26-07-96 ಶುಕ್ರವಾರ	ಖಾಸಗಿ: ಸರ್ಕಾರಿ ಕಾರ್ಯಕಲಾಪ
30-07-96 ಮಂಗಳವಾರ ಹಾಗೂ 31-07-96 ಬುಧವಾರ	ನೀರಾವರಿ ಮತ್ತು ಲೋಕೋಪಯೋಗಿ ಇಲಾಖಾ ಬೇಡಿಕೆಗಳ ಮೇಲೆ ಮತ ಹಾಕುವುದು
01-08-96 ಗುರುವಾರ ಹಾಗೂ 05-08-96 ಸೋಮವಾರ	ಹಣಕಾಸು ಸಾಂಖ್ಯಿಕ ಹಣಕಾಸು ಮತ್ತು ಯೋಜನಾ ಇಲಾಖಾ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು
02-08-96 ಶುಕ್ರವಾರ	ಖಾಸಗಿ: ಸರ್ಕಾರಿ ಕಾರ್ಯಕಲಾಪ
06-07-96 ಮಂಗಳವಾರ ಹಾಗೂ 07-08-96	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಅನುದಾನ ಬೇಡಿಕೆಗಳ ಮೇಲೆ ಮತಕ್ಕೆ ಹಾಕುವುದು

ಬುಧವಾರ	
08-08-96	ಆಹಾರ ಮತ್ತು ನಾಗರೀಕ ಸರಬರಾಜು
ಗುರುವಾರ	ಇಲಾಖೆ, ಕೃಷಿ ತೋಟಾಗಾರಿಕೆ, ಪಶು
ಹಾಗೂ	ಸಂಗೋಪನೆ ಮತ್ತು ಮೀನುಗಾರಿಕೆ
12-08-96	ಇಲಾಖೆ, ವಾರ್ತಾ, ಪ್ರವಾಸೋದ್ಯಮ
ಸೋಮವಾರ	ಮತ್ತು ಯುವಜನ ಸೇವಾ ಹಾಗೂ
	ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಹಕಾರ
	ಇಲಾಖೆ ಮತ್ತು ವಾಣಿಜ್ಯ ಮತ್ತು ಕೈಗಾರಿಕೆ
	ಹಾಗೂ ಇಲಾಖೆಗಳ ಅನುದಾನ ಬೇಡಿಕೆಗಳ
	ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.
09-08-96	ಖಾಸಗಿ: ಸರ್ಕಾರಿಕಾರ್ಯಕಲಾಪ
ಶುಕ್ರವಾರ	
13-08-96	ಶಾಸನ ರಚನೆ ಹಾಗೂ ಸಾರ್ವಜನಿಕ
ಮಂಗಳವಾರ	ಮಹತ್ವದ ವಿಷಯಗಳ ಬಗ್ಗೆ ಚರ್ಚೆ
ಹಾಗೂ	
14-08-96	
ಬುಧವಾರ	

ಸದನವು ಸಮಿತಿಯ ಶಿಫಾರಸ್ಸಿಗೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

SRI SIDDARAMAIAH (DEPUTY CHIEF MINISTER):- on behalf of beg.

I. SRI J.H.PATEL (CHEIF MINISTER) to Lay:-

1. Notification No` DPAR 60 SRE 94, dated 6.3.1996.

Karnataka Educcation Departrental Services (Public Insturction Department) (Recruitment (Amendment) Rules, 1994.

2. Notification No.DPAR 65 SRE 94, dated 24.4.1996.